**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**

**ಸಿ.ಸಿ ನಂ: 975/2026**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಶ್ರೀ.ಕೆ.ಮಲ್ಲಿಕಾರ್ಜುನಪ್ಪ ಬಿನ್ ಸಿದ್ದಪ್ಪ,<br>ವಯಸ್ಸು: 75 ವರ್ಷ,<br>ಉದ್ಯೋಗಃ ವ್ಯವಸಾಯ,<br>ವಾಸಃ ಯಕ್ಕೆಗೊಂದಿ ಗ್ರಾಮ,<br>ಸಿದ್ದನಮಠ ಅಂಚೆ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. | | ಸೈಯದ್ ಕಬೀರ್<br>ಬಿನ್ ಸೈಯದ್ ದಸ್ತಗೀರ್ ಸಾಬ್,<br>ವಯಸ್ಸುಃ 50 ವರ್ಷ,<br>ಉದ್ಯೋಗಃ ಮಾವಿನಗಿಡ ಖೇಣಿ ವ್ಯಾಪಾರಿ<br>ಮತ್ತು ಬಾರ್ ಬೆಂಡರ್,<br>ವಾಸಃ ಕೆರೆಬಿಳಚಿ ಗ್ರಾಮ ಮತ್ತು ಅಂಚೆ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿ ಹೇಳಿಕೆ**

ಪ್ರಶ್ನೆ 1 : ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಲ್ಲವೆ?

ಉತ್ತರ :

ಪ್ರಶ್ನೆ 2 : ಫ್ರಾ.ಸಾ:1 ಕೆ.ಮಲ್ಲಿಕಾರ್ಜುನಪ್ಪ ರವರು ತಮ್ಮ ಸಾಕ್ಷದಲ್ಲಿ ಆರೋಪಿಯಾದ ನೀನು ಪಿರ್ಯಾದುದಾರರಿಂದ ವ್ಯವಹಾರ ಮತ್ತು ಗೃಹಕೃತ್ಯದ ಸಾಲವಾಗಿ ದಿಃ 15.07.2025 ರಂದು ರೂಃ1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು ಆರು ತಿಂಗಳೊಳಗಾಗಿ ಮರುಪಾವತಿ ಮಾಡಲು ಒಪ್ಪಿದ್ದರು." ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 3 : ಫ್ರಾ.ಸಾ:1 ರವರು ಮುಂದುವರಿದು "ಸದರಿ ಸಾಲದ ಮರುಪಾವತಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆರೆಬಿಳಚಿ ಶಾಕೆಯ ಚೆಕ್ ಸಂಃ 673859 ನ್ನು, ರೂಃ1,00,000/- ಹಣಕ್ಕೆ ದಿನಾಂಕಃ 28.01.2026 ಎಂದು ನಮೂದಿಸಿ ನನಗೆ ನೀಡಿದ್ದಾರೆ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 4 : ಫ್ರಾ.ಸಾ: 1 ರವರು ಮುಂದುವರಿದು "ಸದರಿ ಚೆಕ್ಕನ್ನು ದಿಃ 28.01.2025 ರಂದು ನಾನು ತನ್ನ ಖಾತೆ ಇರುವ ಕೆನರಾ ಬ್ಯಾಂಕ್, ಸಂತೆಬೆನ್ನೂರು ಶಾಖೆಯ ಮುಖಾಂತರ ನಗಧೀಕರಣಕ್ಕಾಗಿ ಹಾಜರುಪಡಿಸಿದ್ದು, ಸದರಿ ಚೆಕ್ಕು ದಿಃ 30.01.2026 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ಅಮಾನ್ಯಗೊಂಡಿರುತ್ತದೆ" ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 5 : ಫ್ರಾ.ಸಾ:1 ರವರು ಮುಂದುವರಿದು ಮೇಲ್ಕಂಡ ವಿಚಾರವಾಗಿ ದಿನಾಂಕಃ 10.02.2026 ರಂದು ವಕೀಲರ ಮುಖಾಂತರ ಲೀಗಲ್ ನೋಟಿಸ್ ಕಳುಹಿಸಿದ್ದು, ಅದನ್ನು ನೀವು ದಿನಾಂಕಃ 16-02-2026 ರಂದು ಪುರಸ್ಕರಿಸಿದ್ದು, ಸದರಿ ಸಾಲದ ಹಣವನ್ನು ಸಹ ಮರುಪಾವತಿಸಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಪ್ರಶ್ನೆ 6 : ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರ :

ಪ್ರಶ್ನೆ 7 : ನೀವು ಹೆಚ್ಚಿಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ :

(ಆರೋಪಿತನ ಹೇಳಿಕೆಗಳನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಢೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ, ಸಹಿ/-

ದಿನಾಂಕಃ 10-04-2026. **ಸಿ/ಸಿ 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,**

**ನ್ಯಾಯಾಧೀಶರು, ಚನ್ನಗಿರಿ.**

**ಆರೋಪಿತನ ಸಹಿ:-**